## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

**ಸಿ.ಸಿ.ನಂಃ 6491 /2024** **ಸಿ.ಡಬ್ಲ್ಯೂ–4 ಪಿ.ಡಬ್ಲ್ಯೂ-3**

| | | |
|---|---|---|
| ಹೆಸರು | ಃ | ಮಹೇಶ್ |
| ತಂದೆಃ ಗಂಡ | ಃ | ನಾಗೇಂದ್ರ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | ಃ | ಆಳಂದ |

**ದಿನಾಂಕಃ 19.09.2025**
**ಸತ್ಯ ಪ್ರತಿಜ್ಞೆಯ ಮೇರೆಗೆ**

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ರವರು ನಾವು ಬಾಡಿಗೆಗೆ ಇದ್ದ ಮನೆಯ ಮಾಲಿಕರು ಚಾಸ-5 ನನ್ನ ಹೆಂಡತಿ ಚಾಸ-3 ನನ್ನ ತಮ್ಮ ಚಾಸ-2,6 ಪರಿಚಯ,

ಆರೋಪಿತರು ಮತ್ತು ಚಾಸ-1 ರವರ ಮದ್ಯೆ ಹಣದ ವ್ಯವಹಾರ ಇತ್ತು ಎಂಬ ಕಾರಣಕ್ಕೆ ಚಾಸ-1 ರವರು ಹಣ ಕೇಳಿದಾಗ ಆರೋಪಿತರು ರಾತ್ರಿ ಬಂದು ಚಾಸ-1 ರವರಿಗೆ ಹೊಡೆಬಡೆ ಮಾಡಿರುತ್ತಾರೆ ಸದರಿ ಸಪ್ಪಳವನ್ನು ಕೇಳಿ ನಾನು ಹೊರಗಡೆ ಬಂದು ನೋಡಿದಾಗ ಆರೋಪಿತರು ಚಾಸ-1 ರವರಿಗೆ ಹೊಡೆಯುತ್ತಿದ್ದರು.ಆರೋಪಿತರು ಚಾಸ-1 ರವರ ಕೈ ಯನ್ನು ತಿರುವಿ ಮತ್ತು ಬೆರಳಗಳನ್ನು ಸಹ ತಿರುವಿದರು. ನಾನು ಆಗ ಚಾಸ-1 ರವರಿಗೆ ವಯಸ್ಸಾಗಿರುತ್ತದೆ ಹೊಡೆಬೇಡಿರಿ ಎಂದು ಹೇಳಿದಾಗ ಅವರ ನನ್ನ ಮಾತು ಕೇಳದೆ ಚಾಸ-1 ರವರನ್ನು ನೂಕಿ ಬೀಳಿಸಿರುತ್ತಾರೆ ನಂತರ ಅವರು ಅಲ್ಲಿಂದ ಹೋಗಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಚಾಸ-೧ ರವರು ಮನೆ ಬಾಡಿಗೆಯಿಂದ ಬಂದ ಹಣ ಮತ್ತು ಸರ್ಕಾರದಿಂದ ಬಂದ ಹಣವನ್ನು ಸೇರಿಸಿ ಒಟ್ಟು 1,00,000 ಹಣವನ್ನು ಆರೋಪಿತರಿಗೆ ಕೊಟ್ಟಿದ್ದರು ಎಂದರೆ ನನಗೆ

ಗೊತ್ತಿಲ್ಲ. ದಿಃ ೧೫-೦೭-೨೦೨೪ ರಂದು ನಾನು ಮತ್ತು ಚಾಸಾ-೫ ರವರು ಮನೆಯಲ್ಲಿ ಜಗಳ ಆಡುವ ಸಪ್ಪಳ ಕೇಳಿ ಹೊರಗೆ ಬಂದಿರುತ್ತೇವೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಚಾಸ-೬ ರವರು ಸಹ ಇದ್ದರು ಎಂದರೆ ಸರಿ. ಆಗ ೨ ನೇ ಆರೋಪಿಯು ಚಾಸ-೧ ರವರಿಗೆ ಏ ರಂಡಿ ಪದೇ ಪದೇ ಹಣ ಕೇಳಲು ಬರುತ್ತೀಯಾ ಎಂದು ಅವಾಚ್ಚವಾಗಿ ಬೈದು ಕಪಳದ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿ. ಆಗ ನಾನು ಮತ್ತು ಚಾಸ-೫ ರವರು ಸೇರಿಕೊಂಡು ಜಗಳ ಬೀಡಿಸಿರುತ್ತೇವೆ ಎಂದರೆ ಸರಿ. ನಂತರ ಹೋಗುವಾಗ ನಿನಗೆ ನೋಡಿಕೊಳ್ಳಲು ಯಾರು ಇಲ್ಲ ಇನ್ನೊಮ್ಮೆ ಹಣ ಕೇಳಿದರೆ ನಿನ್ನನ್ನು ಜೀವ ಸಹಿತ ಬೀಡುವುದಿಲ್ಲ ಎಂದುಹೇಳಿ ಜೀವ ಬೆದರಿಕೆ ಎಂದರೆ ಸರಿಯಲ್ಲ. ನಾನು ಈ ರೀತಿ ದಿಃ ೧೮-೦೨-೨೦೨೪ ರಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲುಃ ಆರೋ ಪಿತರ ಪ ರ ಬಿ.ಐ.ಎಸ್. ವಕೀಲರಿಂದಃ-

ನಾನು ಈಗ ಸದ್ಯಕ್ಕೆ ಕಲಬುರಗಿಯಲ್ಲಿ ಇರುತ್ತೇನೆ. ನಾನು ೩ ತಿಂಗಳಿನಿಂದ ಕಲಬುರಗಿಯಲ್ಲಿ ಇರುತ್ತೇನೆ. ನಾನು ಚಾಸ-೧ ರವರ ಮನೆಯಲ್ಲಿ ಬಾಯಿ ಮಾತಿನಲ್ಲಿ ಒಪ್ಪಂದ ಮಾಡಿಕೊಂಡು ಬಾಡಿಗೆಗೆ ಇದ್ದೇನು. ನಾನು ಚಾಸ-೧ ರವರ ಮನೆಯಲ್ಲಿ ಯಾವತ್ತು ಬಾಡಿಗೆ ಇಲ್ಲ ಎಂದರೆ ಸರಿಯಲ್ಲ. ಜಗಳವು ದಿಃ ೨೨ ರಂದು ಆಗಿರುತ್ತದೆ ಮತ್ತು ಯಾವ ವಾರ ಎಂದು ನನಗೆ ಹೇಳಲು ಬರುವುದಿಲ್ಲ. ಆರೋಪಿತರು ಚಾಸ-೧ ರವರ ಮನೆಯ ಮುಂದೆ ಬಂದು ಜಗಳ ಮಾಡುತ್ತಿದ್ದರು. ನಾನು ಜಗಳದ ಸಪ್ಪಳ ಕೇಳಿ ಹೊರಗಡೆ ಬಂದಾಗ ನಮ್ಮ ಓಣಿಯ ಜನರು ಅವರವರ ಮನೆಯ ಮುಂದೆ ನಿಂತು ಜಗಳ ನೋಡುತ್ತಿದ್ದರು. ಅವರು ಯಾರು ಬಂದು ಜಗಳ ಬಿಡಿಸಿಲ್ಲ ಎಂದರೆ ಸರಿ. ನನಗೆ ಸದರಿ ಜಗಳವು ಯಾವ ಕಾರಣಕಾಗಿ ಎಂದು ಗೊತ್ತಿಲ್ಲ ಎಂದರೆ ಸರಿ. ಹಣದ ವ್ಯವಹಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ಆದರೆ ಜಗಳ ಅಗಿತ್ತು ಎಂದು ನುಡಿಯುತ್ತಾರೆ. ಚಾಸ-೧ ರವರಿಗೆ ಸ್ವಂತ ಮನೆ ಇದ್ದು ಮಕ್ಕಳು ಇಲ್ಲ ಎಂದರೆ ಸರಿ. ೨ ನೇ ಆರೋಪಿಯು ಚಾಸ-೧ ರವರಿಗೆ ದಿನಾಲು ಅಡುಗೆ ಮಾಡಿಕೊಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಾಸ-೧ ರವರು ೨ ನೇ ಆರೋಪಿಗೆ ಅಡುಗೆ ಮಾಡಿಕೊಟ್ಟಿದ್ದಕ್ಕಾಗಿ ತಿಂಗಳಿಗೆ ಇಂತಿಷ್ಟು ಹಣವನ್ನು ನೀಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯ ಮುಂದುವರೆದು ನನಗೆ ತಿಳಿದ ಪ್ರಕಾರ ಚಾಸ-೧ ರವರು ಅವರೇ ಅಡುಗೆ ಮಾಡಿಕೊಳ್ಳುತ್ತಿದ್ದರು ಬೇರೆಯವರು ಕೊಟ್ಟಿದ್ದನ್ನು ತಿನುತ್ತಿರಲಿಲ್ಲ ಎಂದು ನುಡಿಯುತ್ತಾರೆ. ೨ ನೇಆರೋಪಿಯು ಹಣ ಕೇಳಲು ಹೋದಾಗ ಚಾಸ-೧ ರವರು ೨ ನೇ ಆರೋಪಿಗೆ ಹೊಡೆಬಡೆ ಮಾಡಿ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಮನೆಯ ಮುಂದೆ ಬಿಳಿ ಹಾಳೆಯ ಮೇಲೆ ಬರೆದುಕೊಂಡು ಸಹಿ ತೆಗೆದುಕೊಂಡಿರುತ್ತಾರೆ. ನಾನು ಸದರಿ ದಾಖಲೆಗೆ ಹೊರತುಪಡಿಸಿ ಬೇರೆ ಎಲ್ಲಿಯೂ ಸಹಿ ಮಾಡಿರುವುದಿಲ್ಲ. ಟೈಪ್ ಮಾಡಿದ ಹೇಳಿಕೆಯಲ್ಲಿ ಏನು ಬರೆದಿರುತ್ತಾರೆ ಎಂದು

ನನಗೆ ಗೋತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹಿತ ಚಾಸ-೧ ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 6491 /2024 ಸಿ.ಡಬ್ಲ್ಯೂ–3 ಪಿ.ಡಬ್ಲ್ಯೂ-2

| | | |
|---|---|---|
| ಹೆಸರು | ಃ | ಸುದೀಪ್ |
| ತಂದೆಃ ಗಂಡ | ಃ | ಪರಮೇಶ್ವರ |
| ವಯಸ್ಸು | ಃ | 18 ವರ್ಷ |
| ಉದ್ಯೋಗ | : | ವಿದ್ಯಾರ್ಥಿ |
| ವಾಸಸ್ಥಳ | ಃ | ಆಳಂದ |

ದಿನಾಂಕಃ 19.09.2025
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1,2 4 ರಿಂದ 6 ಪರಿಚಯ,

2 ನೇ ಆರೋಪಿಯು ಚಾಸ-1 ರವರಿಗೆ ನನ್ನ ಎದುರಗಡೆ ಹೊಡೆದಿರುತ್ತಾರೆ. ಬೇರೆ ಯಾವ ವಿಷಯವು ನನಗೆ ಗೋತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿಃ ೧೮-೦೨-೨೦೨೪ ರಂದು ಚಾಸಾ-೧ ರವರು ತೋರಿಸಿದ ಗುನ್ನಾ ಸ್ಥಳವನ್ನು ನನ್ನ ಹಾಗೂ ಚಾಸ-೭ ರವರ ಸಮಕ್ಷಮ ಪೋಲಿಸರು ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿ ಪಂಚನಾಮೆಯನ್ನು ಮಾಡಿ ಓದಿ ಹೇಳಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಗುನ್ನಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-೨ ಸಾಕ್ಷಿಯ ಸಹಿಯನ್ನು ನಿಪಿ-೨(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಬಿ.ಐ.ಎಸ್. ವಕೀಲರಿಂದಃ-

ನನಗೆ ಚಾಸ-೧ ರವರು ಯಾವ ಕಾರಣಕ್ಕಾಗಿ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆರೊಪಿತರ ಮತ್ತು ಚಾಸ-೧ ರವರ ಮದ್ಯೆ ಏನು ಜಗಳ ಆಗಿರುತ್ತದೆ

ಎಂದು ನನಗೆ ಗೋತ್ತಿಲ್ಲ ಎಂದರೆ ಸರಿ. ನನಗೆ ಪಂಚನಾಮೆಗೆ ಪೋಲಿಸರು ಕರೆದಾಗ ಹೋಗಿರುತ್ತೇನೆ ಎಂದರೆ ಸರಿ. ನನಗೆ ಪಂಚನಾಮೆ ಮಾಡಿದ ಸ್ಥಳದ ಚೆಕ್ಕುಬಂದಿ ಗೋತ್ತು ಪೂರ್ವಕ್ಕೆ ರಸ್ತೆ ಪಶ್ಚಿಮಕ್ಕೆ ರಸ್ತೆ ದಕ್ಷಿಣಕ್ಕೆ ಮನೆಗಳು ಉತ್ತರಕ್ಕೆ ಮನೆಗಳು ಇರುತ್ತವೆ. ನಾನು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ ನನ್ನ ಸಮಕ್ಷಮ ೨ ನೇ ಆರೋಪಿಯು ಚಾಸ-೧ ರವರಿಗೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳ ಯಾರಿಂದ ಮತ್ತು ಹೇಗೆ ಆಯಿತು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಚಾಸ-೧ ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ- ಇರುವುದಿಲ್ಲ.</u>

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ